
# ಸಖಿ

ನಿನ್ನೆಲ್ಲ
ಆಸ್ವಾದನೆಗಳಲ್ಲಿ
ಅವನಿದಾನೆ...
ನೆಲದ ಮರೆಯ
ನಿದಾನದಂತೆ
ಹಸಿರ ಮೇಲಿನ
ಇಬ್ಬನಿಯಂತೆ
ಎಲೆಯ ಮೇಲಿನ
ಮಳೆ ಹನಿಯಂತೆ
ಕಂಡುಕೋ
ಆಸ್ವಾದಿಸಿಕೋ
ಚೆಲುವೆ...

ಬೇಕೆನಿಸಿದಾಗ
ಬಾಹುಗಳಲಿ
ಬಂದಿಸಿಕೋ...
ಮುತ್ತಿಕ್ಕಿ
ಮಧುವ ಹೀರಿಕೋ...
ಎಲ್ಲ ಅನುಭೂತಿಗೂ
ಮುಕ್ತ
ಬಾಗಿಲಿಲ್ಲದ
ಮನೆಯವನು
ಅವನು
ನಿನಗಾಗಿ... ಅಷ್ಟೆ

ಕಾಯದಿರು...
ಅವನಿಲ್ಲವೆಂದು
ಬಳಲದಿರು
ಚೆಲುವೆ...
ನೀನೇ ಅವನಾಗಿ
ಅವನೇ ನೀನಾದ
ಮೇಲೆ
ಈ ಅಗಲಿಕೆಯ
ಹಂಗೇಕೆ
ವಿರಹದ ಮಾತೇಕೆ...

● ಸಿದ್ಧರಾಮ ಹೊನ್ಕಲ್



ವಾಗೀಶ ಹೆಗಡೆ